ದಿನಾಂಕಃ 27-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರವರ ಪರ ಶ್ರೀ ಆರ್.ಎನ್.ಎಚ್. ವಕೀಲರಿಂದಃ**

**43**. ನನ್ನ ಮದುವೆ ನಿಶ್ಚಿತಾರ್ಥ ಕಾರ್ಯಕ್ರಮ ಕೊನಾಲದಲ್ಲಿರುವ ನನ್ನ ಸೋದರ ಮಾವ ಮಾಹಬಲೇಶ್ವರ ವೆಂಕಣ್ಣ ವೈಧ್ಯ ರವರ ಮನೆಯಲ್ಲಿ ನಡೆದಿದೆ. ಆ ಮದುವೆ ಪ್ರಸ್ತಾಪವನ್ನು ನನ್ನ ಸಧ್ರಿ ಮಾವನೆ ತಂದಿರುವುದು ಎಂದರೆ ನನ್ನ ದೊಡ್ಡಪ್ಪ ಯಲ್ಲಾಪುರದ ಕೊಡೆಪಾಲ್ ನ ನಾರಾಯಣ ಗಾಂವಕಾರ ತಂದಿರುವುದು ಎಂದು ನುಡಿಯುತ್ತಾರೆ. ನನ್ನ ಮದುವೆಯಲ್ಲಿ ವರೋಪಚಾರ ಹಾಗೂ ಬಂಗಾರದ ಒಡವೆಗಳು ಕೊಡುವ ಬಗ್ಗೆ ಮಾತುಕತೆ ಆಗಿಲ್ಲ. ನನ್ನ ಮದುವೆಯಲ್ಲಿ ನನಗೆ ತವರು ಮನೆಯಿಂದ ಯಾವುದೇ ಬಂಗಾರ ಹಾಕಿಲ್ಲ. ನನ್ನ ಮದುವೆಯ ಖರ್ಚನ್ನು ಕೂಡ ನನ್ನ ತವರು ಮನೆಯಿಂದ ಮಾಡಿಲ್ಲ. ಸಾಕ್ಷಿ ಸ್ವತಃ ನನ್ನ ಗಂಡನ ಮನೆಯಲ್ಲಿ ಮದುವೆ ನಡೆದಿರುವುದು ಎಂದು ನುಡಿಯುತ್ತಾರೆ. ನನ್ನ ಮದುವೆಯಲ್ಲಿ ನನಗೆ ತವರು ಮನೆಯಿಂದ ಅವಿಭಕ್ತ ಕುಟುಂಬದಿಂದ 50 ತೊಲೆ ಬಂಗಾರ ಹಾಗೂ ಆಗಿನ ಕಾಲದ ರೂ. 2 ಲಕ್ಷ ವರದಕ್ಷಿಣೆ ನೀಡಿ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಯು ಹಿಂದೂ ಪದ್ದತಿಯಂತೆ ಆಗಿದೆ. ಹಿಂದೂ ಮದುವೆ ಪದ್ದತಿಯಂತೆ ವಧುವಿನ ಮನೆಯವರು ಮದುವೆಯ ಛತ್ರದ ಖರ್ಚು, ಊಟದ ಖರ್ಚು ಮುಂತಾದವುಗಳನ್ನು ನೆರವೇರಿಸಬೇಕು ಎಂದರೆ ಸಾಕ್ಷಿ ಮಾಡುವವರು ಮಾಡುತ್ತಾರೆ, ನನ್ನ ಗಂಡನ ಮನೆಯಲ್ಲಿ ಅವುಗಳನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಹಾಗೂ ನನ್ನ ಸಂಬಂಧಿಕರು ಮದುವೆಗೆ ಬಂದಿದ್ದರು. ನನ್ನ ಮದುವೆಗೆ ಪ್ರತಿವಾದಿಗಳು ಖರ್ಚು ಮಾಡಿಲ್ಲ. ನನ್ನ ಮದುವೆಗೆ ಲಗ್ನ ಪತ್ರಿಕೆ ಮಾಡಿಸಿದ್ದಾರೆ. ಎಷ್ಟು ಲಗ್ನ ಪತ್ರಿಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಆ ಲಗ್ನ ಪತ್ರಿಕೆಗಳನ್ನು ಹಂಚಿದ್ದಾರೆ. ನನ್ನ ಮದುವೆ

ಸಾಮಾನ್ಯವಾಗಿ ನಡೆದಿತ್ತು. ನನ್ನ ಮದುವೆಗೆ ಪೊಟೊ ಹಾಗೂ ವಿಡಿಯೋ ಮಾಡಿದ್ದಾರೆ. ಪೊಟೊ ಹಾಗೂ ವಿಡಿಯೊವನ್ನು 2 ನೇ ಪ್ರತಿವಾದಿ ಮಾಡಿಸಿದ್ದಾರೆ. ನನ್ನ ಮದುವೆಗೆ ಎಷ್ಟು ಜನ ಸೇರಿದ್ದರು ಎಂದು ಗೊತ್ತಿಲ್ಲ. ತವರು ಮನೆಯಿಂದ ನನ್ನ ಗಂಡನಿಗೆ ಉಂಗುರ ಮತ್ತು ಚೈನ್ ಹಾಕಿದ್ದರು. ನನ್ನ ಗಂಡನ ಮನೆಯಿಂದ ನನಗೆ 30 ತೊಲೆ ಬಂಗಾರ ಮದುವೆಯ ಒಂದು ತಾಸು ಮೊದಲು ಹಾಕಿದ್ದರು. ಪೊಟೊ ಹಾಗೂ ವಿಡಿಯೋ ಮದುವೆಯ ದಿನ ಯಾವ ಹೊತ್ತಿನಿಂದ ಮಾಡಲು ಪ್ರಾರಂಭವಾಯಿತು ಎಂದು ನಾನು ನೋಡಿಲ್ಲ. ಆ 30 ತೊಲೆ ಬಂಗಾರ ಹಾಕುವ ಸಂಧರ್ಭದಲ್ಲಿ ಪೊಟೊ ಹಾಗೂ ವಿಡಿಯೋ ತೆಗೆದಿಲ್ಲ. ನನ್ನ ಮದುವೆ ದಿಬ್ಬಣ ನನ್ನ ಸೋದರ ಮಾವನ ಮನೆಯಿಂದ ಹೊರಟಿತ್ತು. ಆ ರೀತಿ ಮದುವೆ ದಿಬ್ಬಣ ಹೊರಟಾಗ ಕಿವಿ ಓಲೆ ಹಾಗೂ ಗಾಜಿನ ಬಳೆ ಇತ್ತು. ಆ ರೀತಿ ದಿಬ್ಬಣ ಹೊರಡುವ ಸಂದರ್ಭ ದಲ್ಲಿ ಯಾರು ಯಾರು ಇದ್ದರು ಎಂದು ನೆನಪಿಲ್ಲ. ವಧುವಿಗೆ ಯಾವುದೇ ಬಂಗಾರದ ಆಭರಣ ತೊಡಿಸಿಲ್ಲ ಎಂದು ಅಲ್ಲಿ ಸೇರಿದವರು ಯಾರಾದರು ಪಿಸು ಮಾತನಾಡಿದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅತ್ತೆ ಮಾವ ಮದುವೆ ಸಂದರ್ಭ ದಲ್ಲಿ ಜೀವಂತ ಇದ್ದರು. ನನ್ನ ಅತ್ತೆ ಮಾವ ಕೂಡ ಬಂಗಾರ ಹಾಕಿಲ್ಲ ಎಂದು ಹೇಳಿಲ್ಲ.

**44.** ಮದುವೆ ಸಂದರ್ಭದಲ್ಲಿ ದಾವಾ ಅ ಸ್ವತ್ತಿನಲ್ಲಿ ಬೆಳೆ ಬರುತ್ತಿತ್ತು. ನನ್ನ ಸೋದರ ಮಾವನ ಮನೆಯಲ್ಲಿ ಕೂಡ ಅಡಿಕೆ ತೋಟ ಇದೆ ಎಂದರೆ ಸರಿ. ನನ್ನ ಮದುವೆ ಸಂದರ್ಭ ದಲ್ಲಿ ನನ್ನ ತವರು ಮನೆಯವರು ಆರ್ಥಿಕವಾಗಿ ಸಬಲರು ಇದ್ದರು ಎಂದರೆ ಸಾಕ್ಷಿ ಸಾಮಾನ್ಯವಾಗಿ ಸಬಲರು ಇದ್ದರು ಎಂದು ನುಡಿಯುತ್ತಾರೆ. ನನ್ನ ಮದುವೆ ಸಂದರ್ಭದಲ್ಲಿ ವಾರ್ಷಿಕವಾಗಿ ನನ್ನ ತವರು ಮನೆಗೆ ಎಷ್ಟು ಆದಾಯ ಇತ್ತು ಎಂದು ಗೊತ್ತಿಲ್ಲ. ನನ್ನ ಮದುವೆ ಸಂದರ್ಭದಲ್ಲಿ ವರದಕ್ಷಿಣೆ ಇತ್ತು ಎಂದರೆ ಸಾಕ್ಷಿ ಆ ಸಂದರ್ಭದಲ್ಲಿ

ಕೂಡ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ವಧು ಹಾಗೂ ವರ ರ ಆರ್ಥಿಕ ಸಮಾನತೆಯನ್ನು ನೋಡಿ ಮದುವೆ ಮಾಡುತ್ತಿದ್ದರು ಎಂದರೆ ಸರಿ. ವಧು ಮನೆಯವರು ಶ್ರೀಮಂತ ಇದ್ದಾಗ ಬೇಗ ಮದುವೆ ಪ್ರಸ್ತಾಪವನ್ನು ವರನ ಕಡೆಯವರು ಒಪ್ಪಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆ ಸಂದರ್ಭದಲ್ಲಿ ನನಗೆ 19 ವರ್ಷ ವಯಸ್ಸಾಗಿತ್ತು. ನಾನು ಸುರದ್ರೂಪಿ ಇದ್ದುದರಿಂದ ಹಾಗೂ ನನ್ನ ತವರು ಮನೆಯವರು ಶ್ರೀಮಂತರು ಇದ್ದುದರಿಂದ ನನಗೆ ಬೇಗ ಮದುವೆ ಪ್ರಸ್ತಾಪ ಬಂತು ಎಂದರೆ ಸಾಕ್ಷಿ ಆ ರೀತಿ ಅಲ್ಲ, ನನ್ನ ಮದುವೆ ಬೇಗ ಮಾಡಬೇಕು ಎಂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮದುವೆ ಪ್ರಾಸ್ತಾಪ ಬಂದಾಗ ಆರ್ಥಿಕವಾಗಿ ಸಬಲರಿದ್ದಾಗ ಮದುವೆ ಪ್ರಾಸ್ತಾವ ಒಪ್ಪಿ ಮದುವೆ ಆಗುತ್ತದೆ ಎಂದರೆ ಸಾಕ್ಷಿ ನನ್ನ ಮದುವೆ ಸಂದರ್ಭ ದಲ್ಲಿ ನಮಗೆ ಮನೆ ಇರಲಿಲ್ಲ, ಕಟ್ಟುತ್ತಾ ಇದ್ದರು ಹಾಗೂ ಆರ್ಥಿಕವಾಗಿ ಅಷ್ಟೇನು ಸಬಲತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಮನೆ ಈಗ ಗೋದಾಮು ಎಂದು ದಾವೆಯಲ್ಲಿ ಹೇಳಿರುವ ಮನೆಯಾಗಿರುತ್ತದೆ. ನಾನು ಮದುವೆಯಾಗಿ ಹೋಗುವಾಗ ನನ್ನ ಗಂಡನ ಮನೆಯಲ್ಲಿ 6 ಎಕರೆ ತೋಟ ಹಾಗೂ 2 ಎಕರೆ ಗದ್ದೆ ಇತ್ತು. ನನ್ನ ಮಾವನ ಹೆಸರು ಮಹಾದೇವ. ನನ್ನ ಮಾವನಿಗೆ ನನ್ನ ಗಂಡ ಒಬ್ಬ ಮಗ ಹಾಗೂ ಒಬ್ಬಳು ಮಗಳು. ನನ್ನ ಮದುವೆ ಸಂದರ್ಭದಲ್ಲಿ ನನ್ನ ಗಂಡನೆ ಆ ತೋಟದ ಮೇಲ್ವಿಚಾರಣೆ ಮಾಡುತ್ತಿದರು. ಆ ಜಮೀನುಗಳ ಪೈಕಿ ಕೆಲವೊಂದು ನನ್ನ ಗಂಡನ ಹೆಸರು ಹಾಗೂ ಕೆಲವೊಂದು ನನ್ನ ಮಾವನ ಹೆಸರಿನಲ್ಲಿ ಇದೆ. ಅವರಿಬ್ಬರ ಹೆಸರು ಹೊರತು ಪಡಿಸಿ ಬೇರೆ ಯಾರ ಹೆಸರಿನಲ್ಲಿ ಇಲ್ಲ. ಆ ಜಮೀನಿನ ಆದಾಯವನ್ನು ಹಂಚಿಕೊಳ್ಳುತ್ತಿರಲಿಲ್ಲ. ಒಟ್ಟಾಗಿ ಇಟ್ಟು ಕೊಳ್ಳುತ್ತಿದ್ದರು. ಮದುವೆ ಸಂದರ್ಭದಲ್ಲಿ ಎಷ್ಟು ವಾರ್ಷಿಕ ಆದಾಯ ಇತ್ತು ಎಂದು ನಾನು ತಿಳಿದುಕೊಂಡಿರಲಿಲ್ಲ. ನನ್ನ ಗಂಡನಿಗೆ ಅಲ್ಲಿರುವ ಭಾಗದ ಹಕ್ಕಿಗಿಂತ

ನನ್ನ ತವರು ಮನೆಯಲ್ಲಿ ಹೆಚ್ಚು ಆಸ್ತಿ ಇತ್ತು ಎಂದರೆ ಸರಿ. ನನ್ನ ತವರು ಮನೆಯವರು ಮದುವೆ ಸಂರ್ದಭದಲ್ಲಿ ಹಾಗೂ ಈಗಲೂ ನನ್ನ ಗಂಡನ ಮನೆಗಿಂತ ಆರ್ಥಿಕ ಸಬಲರು ಎಂದರೆ ಸಾಕ್ಷಿ ಮದುವೆ ಸಂದರ್ಭದಲ್ಲಿ ಇದ್ದರು ಈಗ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವಾದ ಪತ್ರದಲ್ಲಿ ತವರು ಮನೆಯವರು ಮದುವೆ ಸಂದರ್ಭದಲ್ಲಿ ಏನು ನೀಡಿಲ್ಲ, ಖುಲ್ಲಾ ಕಳುಹಿಸಿದ್ದರು ಎಂದು ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಶ್ಚಿತಾರ್ಥದ ಅಂದಾಜು 5-6 ತಿಂಗಳ ನಂತರ ನನ್ನ ಮದುವೆ ನಡೆಯಿತು. ನನ್ನ ಮದುವೆ ಸಂದರ್ಭದಲ್ಲಿ 50 ತೊಲೆ ಬಂಗಾರವನ್ನು ಹಾಕಿ ಮದುವೆ ಮಾಡಿಸಿದ್ದರು ಎಂದರೆ ಸರಿಯಲ್ಲ.

**45.** ನನ್ನ ತಾಯಿ ಸಲ್ಲಿಸಿದ ಉದಾಹರಣೆಯನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನಲ್ಲಿ ಫಸಲು ನೀಡುವ ತೆಂಗಿನ ಮರ ಹಾಗಾ ಕಾಳು ಮೆಣಸು ನೀಡುವ ಬಳ್ಳಿ ಗಳು ಇವೆ. ತೆಂಗಿನ ಮರಗಳಿಗೆ ಹಾಗೂ ಕಾಳು ಮೆಣಸುಗಳಿಗೆ ನೀರು , ಗೊಬ್ಬರ ಹಾಕಬೇಕು ಎಂದರೆ ಸರಿ. ಉತ್ಪನ್ನದ ಶೇ.70 ದಾವಾ ಆಸ್ತಿ ಗೆ ಖರ್ಚು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಎಷ್ಟು ತೆಂಗಿನ ಮರಗಳು ಇವೆ ಎಂದು ಗೊತ್ತಿಲ್ಲ. ವಾರ್ಷಿಕವಾಗಿ ಅವುಗಳಲ್ಲಿ ಎಷ್ಟು ತೆಂಗಿನ ಕಾಯಿ ಫಸಲು ಬರುತ್ತದೆ ಎಂದು ಗೊತ್ತಿಲ್ಲ. ಎಷ್ಟು ಕಾಳು ಮೆಣಸು ಗಿಡಗಳು ಇವೆ ಎಂದು ಗೊತ್ತಿಲ್ಲ. ಕಾಳು ಮೆಣಸು ಗಿಡಗಳಿಂದ ಎಷ್ಟು ಫಸಲು ಬರುತ್ತದೆ ಎಂದು ಗೊತ್ತಿಲ್ಲ. 2 ನೇ ಪ್ರತಿವಾದಿ ಪ್ರತಿವರ್ಷ 50 ಕ್ವಿಂಟಾಲ್ ಅಡಿಕೆ ಉತ್ಪನ್ನ , ಕನಿಷ್ಟ 9 ರಿಂದ 10 ಸಾವಿರ ತೆಂಗಿನ ಕಾಯಿ ಹಾಗೂ ಕಾಳು ಮೆಣಸು ಬೆಳೆದು ಅದರ ಸಾಕಷ್ಟು ಆದಾಯವನ್ನು ನಾನೆ ಪಡೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ನಾನು ಆದಾಯವನ್ನು ಇದುವರೆಗೆ

ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೆ ವಾದಿ ಹಾಗೂ ಪ್ರತಿವಾದಿ ಎಂಬ ಶಬ್ದಗಳ ಅರ್ಥ ಗೊತ್ತು. ನಾನು 2 ನೇ ಪ್ರತಿವಾದಿ ಜೊತೆ ಅವರ ವಕೀಲರ ಕಚೇರಿಗೆ ಹೋಗಿಲ್ಲ.

**46.** ನನ್ನ ಪರವಾಗಿ ಹಾಜರು ಪಡಿಸಿದ ದಾಖಲೆಗಳನ್ನು ನೋಡಿದ್ದೇನೆ. ನಿಪಿ-13 ರಲ್ಲಿ ನನ್ನ ಹಾಗೂ ನನ್ನ ತಾಯಿಯ ಸಹಿಗಳು ಇಲ್ಲ ಎಂದರೆ ಸರಿ. ಆ OS No. 6/2006 ಹಾಜರು ಪಡಿಸಿದ ರಾಜಿ ಅರ್ಜಿಯಲ್ಲಿ ನನ್ನ ಹಾಗೂ ನನ್ನ ತಾಯಿಯ ಸಹಿಗಳು ಇಲ್ಲದೆ ಇದ್ದುದರಿಂದ ಆ ರಾಜಿ ಅರ್ಜಿ ಆಧಾರದಲ್ಲಿ ನ್ಯಾಯಾಲಯ ಡಿಕ್ರಿ ಮಾಡಿಲ್ಲ ಹಾಗೂ ಆ ದಾವೆ ನ್ಯಾಯಾಲಯದಲ್ಲಿ ಮುಕ್ತಾಯ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರವನ್ನು ಓದಿ ಕೊಂಡಿದ್ದೇನೆ. ನನ್ನ ವಾದ ಪತ್ರದಲ್ಲಿ ಹೇಳಿರುವ 2 ನೇ ಪ್ರತಿವಾದಿ ಅತಿಕ್ರಮಣ ಭೂಮಿಯಲ್ಲಿರುವ ಮನೆಯಲ್ಲಿ ವಾಸ ಇದ್ದಾರೆ ಎಂದು ಹೇಳುವ ಮನೆ ಯಲ್ಲಾಪುರದಲ್ಲಿರುವ ಮನೆ. ಆ ಅತಿಕ್ರಮಣ ಭೂಮಿಯನ್ನು ಯಾರಿಂದ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಆ ಮನೆಯಲ್ಲಿ ಅವರು 3 ವರ್ಷಗಳಿಂದ ವಾಸ ಮಾಡುತ್ತಾ ಇದ್ದಾರೆ. ನಾನು ದಾವಾ ಸ್ವತ್ತಿಗೆ ಕೊನೆಯದಾಗಿ ಯಾವಾಗ ಹೋಗಿರುವುದು ಎಂದು ನೆನಪಿಲ್ಲ. 2 ನೇ ಪ್ರತಿವಾದಿ ಈಗಲೂ ಹೋಗಿ ಬರುತ್ತಾರೆ. ಸಾಕ್ಷಿ ಸ್ವತಃ 1 ನೇ ಪ್ರತಿವಾದಿ ಮನೆ ಬಾಗಿಲು ತೆಗೆಯದೆ ಇರುವುದರಿಂದ ಹೊರಗಡೆ ಕೂತು ಬರುತ್ತಾರೆ. ಆ ರೀತಿ ಬಾಗಿಲು ತೆಗೆಯದೆ ಇದ್ದುದರಿಂದ ಹೊರಗಡೆ ಕುಳಿತು ಬಂದೆ ಎಂದು ನನ್ನ ತಾಯಿ ಈಗ್ಗೆ ಒಂದು ತಿಂಗಳ ಹಿಂದೆ ಹೇಳಿದ್ದರು. ನನ್ನ ತಾಯಿ RCC ಮನೆಗೆ ಹೋಗಿ ಹೊರಗಡೆ ಕುಳಿತು ಬಂದದ್ದು ಎಂದು ಹೇಳಿದ್ದಾರೆ. ನಾನು ಹೇಳಿದಂತಹ ಗೋದಾಮುವಿನಲ್ಲಿ ವಾಸಿಸುವ ರೀತಿಯಲ್ಲಿ ಈಗ ಇರುವುದಿಲ್ಲ. 3 ವರ್ಷಗಳ ಹಿಂದೆ ವಾಸ ಮಾಡುವ ರೀತಿ ಇತ್ತು. RCC ಮನೆಯಲ್ಲಿ ಉಳಿಯಲು ಪ್ರಾರಂಭಿಸಿದ ನಂತರ ಆ ಗೋದಾಮು ಮನೆಯಲ್ಲಿ

ವಾಸಿಸುವ ರೀತಿ ಇದ್ದ ವ್ಯವಸ್ಥೆ ಯನ್ನು ತೆಗೆದಿದ್ದಾರೆ. ಆ ಗೋದಾಮುವಿನ ವಿಸ್ತೀರ್ಣ ಹೇಳಲಾಗುವುದಿಲ್ಲ. ಆ ಗೋದಾಮಿಗೆ ಎಷ್ಟು ಹಂಚುಗಳನ್ನು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಗೋದಾಮಿನ ಬೆಲೆ ರೂ. 40 ಲಕ್ಷ ಎಂದು ಅದಕ್ಕೆ ಹಾಕಿದ ಮರಗಳ ಆಧಾರದಲ್ಲಿ ಹಾಗೂ ಅಂದಾಜಿನಲ್ಲಿ ಹೇಳಿದೆ.

**47**. ನನಗೆ ಎರಡು ಜನ ಮಕ್ಕಳು. ನನ್ನ ಮಗಳ ಹೆಸರು ಪೂರ್ವಿ. ಆಕೆ ಯಲ್ಲಾಪುರದಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ ಎಂದರೆ ಸರಿ. ನನ್ನ ಮಗ ಪ್ರಥ್ವಿರಾಜ ಪುಣೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ನನ್ನ ಮಗಳು ಯಲ್ಲಾಪುರದ ಪಂಚಾಯತಿಯ ಮನೆ ನಂಬರ್ 18-508-153 ರಲ್ಲಿ ಉಳಿದು ಶಾಲೆಗೆ ಹೋಗುವುದು ಎಂದರೆ ಸರಿ. ಆಕೆ 3 ವರ್ಷದಿಂದ ಯಲ್ಲಾಪುರದ ವಿಶ್ವ ದರ್ಶನ ಶಾಲೆಯಲ್ಲಿ ಓದುತ್ತಿದ್ದಾಳೆ. ನನ್ನ ಗಂಡನ ಮನೆಯಿಂದ ಯಲ್ಲಾಪುರದ 150 ಕಿ.ಮೀಟರ ದೂರದಲ್ಲಿದೆ. ನನ್ನ ತಾಯಿ ಆಕೆಯ ಮೇಲ್ವಿಚಾರಣೆ ನೋಡಿ ಕೊಳ್ಳುತ್ತಾಳೆ. ನನ್ನ ತಾಯಿ ಮತ್ತು ನನ್ನ ಮಗಳಿಗೆ ಊಟೋಪಚಾರಕ್ಕೆ ನಾನೆ ವಸ್ತುಗಳನ್ನು ಪೂರೈಸುತ್ತೇನೆ. ಆಕೆಯ ಊಟೋಪಚಾರ ಹಾಗೂ ಶಾಲಾ ಖರ್ಚಿಗೆ ವಾರ್ಷಿಕ ಸುಮಾರು ರೂ.50,000/- ಖರ್ಚು ಬರುತ್ತದೆ. ನನ್ನ ಮಗಳಿಗೆ ಸತತ 4 ದಿನ ರಜೆಗಳು ಇದ್ದಾಗ ನನ್ನ ಮನೆಗೆ ಬಂದು ಹೋಗುತ್ತಾಳೆ. ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ಮಧ್ಯೆ ಈಗ 3 ವರ್ಷಗಳಿಂದ ಸಂಬಂಧ ಚೆನ್ನಾಗಿ ಇಲ್ಲ. ನಾನು ಹಾಗೂ ನನ್ನ ಗಂಡ ದಾವಾ ಮನೆಗೆ ಕೊನೆಯ ಬಾರಿ ಹೋಗಿ ಸುಮಾರು 3 ವರ್ಷ ಆಗುತ್ತಾ ಬಂತು. ನಾನು 3 ವರ್ಷದ ಹಿಂದೆ ಹೋಗಿದ್ದೆ ಎಂದು ಸುಳ್ಳು ಹೇಳಿರುತ್ತೇನೆ ಹಾಗೂ ನನ್ನ ಮದುವೆ ನಂತರ ನಾನು ಹಾಗೂ ನನ್ನ ಗಂಡ ದಾವಾ ಸ್ವತ್ತಿಗೆ ಬಂದದ್ದೆ ಇಲ್ಲ ಎಂದರೆ ಸರಿಯಲ್ಲ. ನಾನು 20 ವರ್ಷಗಳ ಮೇಲ್ಪಟ್ಟು ದಾವಾ ಸ್ವತ್ತಿಗೆ ಬರದೆ ಇದ್ದುದರಿಂದ ದಾವಾ ಸ್ವತ್ತಿನಲ್ಲಿ ನನ್ನ ಹಕ್ಕು ನಷ್ಟವಾಗಿದೆ ಎಂದರೆ ಸರಿಯಲ್ಲ. OS No. 6/2006 ರಲ್ಲಿ ವಾದಿಯಾಗಿದ್ದ 1 ನೇ

ಪ್ರತಿವಾದಿ ನನ್ನನ್ನು ಮದುವೆ ಮಾಡಿ ಕೊಟ್ಟಿದ್ದುದರಿಂದ ನನಗೆ ಆ ದಾವೆಯ ಆಸ್ತಿಯಲ್ಲಿ ಯಾವುದೇ ಕಾನೂನು ಬದ್ದ ಹಕ್ಕು ಇಲ್ಲ ಎಂದು ಪ್ರತಿಪಾದಿಸಿರುವುದಕ್ಕೆ ನಾನು ತಕರಾರು ಸಲ್ಲಿಸದೇ ಇದ್ದುದರಿಂದ ನನಗೆ ಕಾನೂನು ಬದ್ದವಾಗಿದ್ದ ಹಕ್ಕು ನಷ್ಟವಾಗಿದೆ ಎಂದರೆ ಸರಿಯಲ್ಲ.

**48**. ಯಲ್ಲಾಪುರದ ಮನೆಯಲ್ಲಿ ನನ್ನ ತಾಯಿಯ ಬಳಿ ಇರುವ ಬಂಗಾರ ಮತ್ತು ಬೆಳ್ಳಿಯ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. 1 ನೇ ಪ್ರತಿವಾದಿ ಅವರ ಹೆಂಡತಿಯಾದ ಭವ್ಯಾ ರವರ 45 ತೊಲೆ ಬಂಗಾರ ಹಾಗೂ 1 ಕೆಜಿ ಬೆಳ್ಳಿಯನ್ನು ನನ್ನ ತಾಯಿ ತೆಗೆದುಕೊಂಡು ಹೋಗಿ ಯಲ್ಲಾಪುರದಲ್ಲಿ ಇಟ್ಟಿದ್ದಾರೆ ಎಂದು ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾಲ್ಲಾಪುರದ ಮನೆಗೆ ಎಷ್ಟು ಬಾರಿ ಹೋಗಿದ್ದೇನೆ ಎಂದರೆ ಲೆಕ್ಕ ಇಲ್ಲ ಸುಮಾರು ಬಾರಿ ಹೋಗಿದ್ದೇನೆ. ದಾವಾ ಸ್ವತ್ತಿನಲ್ಲಿ ಇದ್ದ ಮನೆಯಲ್ಲಿದ್ದ ಕಪಾಟು ಈಗ ಯಲ್ಲಾಪುರದ ಆ ಮನೆಯಲ್ಲಿರುವ ಕಪಾಟು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿಯ 45 ತೊಲೆ ಬಂಗಾರ ಹಾಗೂ 1 ಕೆಜಿ ಬೆಳ್ಳಿಯನ್ನು ನನ್ನ ತಾಯಿ ಕುಟುಂಬದ ಉಸ್ತುವಾರಿ ನೋಡುತ್ತಿದ್ದುದರಿಂದ 1 ನೇ ಪ್ರತಿವಾದಿ ಅವರ ಬಳಿ ಇಟ್ಟಿದ್ದರು ಎಂದರೆ ಸರಿಯಲ್ಲ. ಆ ಬಂಗಾರ ಹಾಗೂ ಬೆಳ್ಳಿಯನ್ನು ಲಪಟಾಯಿಸಲು ನನ್ನ ತಾಯಿ ನನ್ನ ಮೂಲಕ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಹೇಳಿರುವಂತಹ ಕೊಡ್ಲಗದ್ದೆ ಗ್ರಾಮದ 5 ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸದೆ ಇರುವುದರಿಂದ ಈ ದಾವೆಯು ವಾಂಟಣಿ ಮಾಡಲು ಯೋಗ್ಯವಾದ ದಾವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು ನಿಪಿ-2 ರಲ್ಲಿ ಹೇಳಿರುವ ಸಾಲಗಳು ನನ್ನ ಹಾಗೂ 1 ನೇ ಪ್ರತಿವಾದಿ ಹೆಸರಿನಲ್ಲಿರುವ ಸಾಲಗಳು ಎಂದರೆ ಸಾಕ್ಷಿ ನಾನು ಅಲ್ಲಿ ವ್ಯವಹಾರ ಮಾಡಿಲ್ಲ ಹಾಗೂ 1 ನೇ ಪ್ರತಿವಾದಿ ಪಡೆದಿರುವ ಸಾಲ ಹಾಗೂ ಆ ಬ್ಯಾಂಕಿನವರು 1 ನೇ

ಪ್ರತಿವಾದಿ ಹೆಸರಿಗೆ ಸಾಲ ಕೊಟ್ಟಿರುವುದು ಎಂದು ಹೇಳಿದ್ದಾರೆ ಎಂದು ನುಡಿಯುತ್ತಾರೆ. ಆ ಸಾಲಗಳಿಗೂ ನನಗೂ ಸಂಬಂಧ ಇಲ್ಲ ಎಂದು ನಾನು ವಕೀಲರಿಗೆ ಹೇಳಿದ್ದೇನೆ. ನನ್ನ ವಾದ ಪತ್ರದಲ್ಲಿ ಆ ಸಾಲಗಳು ನನಗೆ ಸಂಬಂಧ ಪಟ್ಟಿಲ್ಲ ಹಾಗೂ 1 ನೇ ಪ್ರತಿವಾದಿ ಪಡೆದಿರುವ ಸಾಲಗಳು ಎಂದು ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ನನಗೆ ಸಂಬಂಧ ಇಲ್ಲದ ಸಂಗತಿವಾಗಿರುವುದರಿಂದ ನಾನು ವಾದ ಪತ್ರದಲ್ಲಿ ಹೇಳಿಲ್ಲ ಎಂದು ನುಡಿಯುತ್ತಾರೆ. ನಾನು ಆ ಸಾಲಗಳು 1 ನೇ ಪ್ರತಿವಾದಿಗೆ ಸಂಬಂಧಪಟ್ಟಿದ್ದು ಹಾಗೂ ಆತನಿಂದಲೇ ವಸೂಲು ಮಾಡಬೇಕೆಂದು ಹೇಳಿ TSS ಬ್ಯಾಂಕ್ ಗೆ ಮಾತ್ರ ಕೊಟ್ಟಿದ್ದೇನೆ. ಆ ಅರ್ಜಿಯ ನಕಲನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಸಾಕ್ಷಿ ಸ್ವತಃ ನಾನು ಇನ್ನೂ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ಆ ಅರ್ಜಿಗಳನ್ನು 2022 ಮತ್ತು 2023 ರಲ್ಲಿ ಕೊಟ್ಟಿದ್ದೇನೆ. ಆ ಅರ್ಜಿಗಳ ಬಗ್ಗೆ ವಿಚಾರಿಸಿದ್ದೇನೆ . ಆ ಗ ಅವರು ಆ ಸಾಲಗಳು ನನ್ನ ಮೇಲೆ ಬರುವುದಿಲ್ಲ ಹಾಗೂ 1 ನೇ ಪ್ರತಿವಾದಿಯೇ ಬಾಧ್ಯಸ್ಥರು ಹಾಗೂ ಅದರ ಬಗ್ಗೆ ದಾಖಲೆಗಳು ನ್ಯಾಯಾಲಯದಿಂದ ಆದೇಶ ಬಂದರೆ ಕೊಡುತ್ತೇವೆ ಎಂದು ಹೇಳಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ನಾನೇ ಸ್ವತಃ 2022 ರಲ್ಲಿ TSS ಬ್ಯಾಂಕ್ ನಲ್ಲಿ ನನ್ನ ಗಂಡನ ಮನೆ ಕಟ್ಟಲು ರೂ. 30 ಲಕ್ಷ ಸಾಲ ಪಡೆದೆ ಎಂದರೆ ಸರಿಯಲ್ಲ. ಆದ್ದರಿಂದ ಆ ಸಾಲಗಳ ಸಂಬಂಧ ನನ್ನ ವಾದ ಪತ್ರದಲ್ಲಿ ಹೇಳದೆ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ಜಂಟಿ ಖಾತೆ ಇದ್ದಾಗ ಸಾಲ ಪಡೆಯಲು ಜಂಟಿ ಖಾತೆ ದಾರರ ಸಹಿಗಳು ಬೇಕಾಗುತ್ತದೆ ಎಂದರೆ ಸರಿ. ನಾನು ಆ ರೂ.30 ಲಕ್ಷ ಸಾಲವನ್ನು 1 ನೇ ಪ್ರತಿವಾದಿಯ ಸಹಿಯನ್ನು ಕೂಡ ಪಡೆದುಕೊಂಡು ಪಡೆದೆ ಎಂದರೆ ಸರಿಯಲ್ಲ. ನಾನು ರಾಮನಗುಳಿ ಗ್ರೂಪ್ ಸೇವಾ ಸಹಕಾರಿ ಸಂಘದಲ್ಲಿ ಸಾಲ ಪಡೆದಿದ್ದೀರಾ ಎಂದರೆ ಸಾಕ್ಷಿ ನಾನು ಸಾಲ ಪಡೆದಿಲ್ಲ , ಆದರೆ ಸಾಲ ತುಂಬುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ಸಹಕಾರಿ

ಸಂಘದಲ್ಲಿ ನನ್ನ ಸಾಲದ ಖಾತೆ ಇದೆ. ನನ್ನ 18 ವರ್ಷ ಪ್ರಾಯದಿಂದ ದಾವಾ ಎ ಸ್ವತ್ತಿನ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಬರಲು ಪ್ರಾರಂಭಿಸಿದೆ. ನಾನು ಈಗ್ಗೆ 3 ವರ್ಷಗಳಿಂದ ಆ ಸಹಕಾರಿ ಸಂಘದಲ್ಲಿ ಬೆಳೆ ಸಾಲ ಪಡೆದು ತುಂಬುತ್ತಾ ಬಂದಿದ್ದೇನೆ. ನನಗೆ ದಾವಾ ಎ ಸ್ವತ್ತಿಗೆ ರೂ. 1,60,000/- ಬೆಳೆ ಸಾಲ ನೀಡುತ್ತಾರೆ. ಆ ಸಾಲ ಪಡೆದು ನಾನು ಠೇವಣಿಯಾಗಿ ಇಟ್ಟಿಲ್ಲ. ಅದನ್ನು ಅವಧಿ ಮುಗಿಯುವ ಮೊದಲು ಸಾಲ ತುಂಬಿದ್ದೆ. ನಾನು ಮಾಧ್ಯಮಿಕ ಸಾಲವನ್ನು ಪಡೆದಿಲ್ಲ. ನಿಪಿ-1 ಮತ್ತು 2 ರಲ್ಲಿ ಹೇಳಿರುವ ಸಾಲಗಳನ್ನು ನಾನೇ ಪಡೆದು , ಅದನ್ನು ಹೇಳದೆ 1 ನೇ ಪ್ರತಿವಾದಿಯ ಮೇಲೆ ಹೇರುತ್ತಿದ್ದೇನೆ ಎಂದರೆ ಸರಿಯಲ್ಲ.

**49**. ನನ್ನ ತಂದೆ ರಸ್ತೆ ಅಪಘಾತದಲ್ಲಿ ಮೃತ ಪಟ್ಟ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ನೀಡಿದ ಪರಿಹಾರವನ್ನು ಕಡಿಮೆಯಾಯಿತು ಎಂದು MFA NO. 10271/1989 ರಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಹೆಚ್ಚಿನ ಪರಿಹಾರ ರೂ. 94,000/- ಆದೇಶವಾಯಿತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಹಾಗೂ 1 ನೇ ಪ್ರತಿವಾದಿ ಅಪ್ರಾಪ್ತವಾಗಿರುವುದರಿಂದ ನನ್ನ ತಾಯಿಯೇ ಆ ಹಣವನ್ನು withdraw ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ಪರಿಹಾರದ ಹಣ ಕೂಡ ಈ ದಾವೆ ನಿರ್ಣಯಿಸಲು ಅಗತ್ಯವಾದ ದಾವಾ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆ ಯಲ್ಲಾಪುರದ ಮನೆ ಸ್ವತ್ತಿನ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಅದು ನನ್ನ ತಾಯಿಯ ಸ್ವಂತ ಸ್ವತ್ತಾಗಿರುವುದರಿಂದ ಅದರ ದಾಖಲೆ ಹಾಜರಪಡಿಸುವ ಅಗತ್ಯ ಇಲ್ಲ ಎಂದು ನುಡಿಯುತ್ತಾರೆ. ಆ ಯಲ್ಲಾಪುರದ ಮನೆ ಕೂಡ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುವುದರಿಂದ ಈ ದಾವೆ ನಿರ್ಣಯಿಸಲು ಅಗತ್ಯ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. 1997

ಇಸ್ವಿಯಲ್ಲಿ ಕಾನೂನು ಬದ್ಧವಾಗಿ ನಾನು ಹೇಳಿದಂತಹ ಮೌಖಿಕ ವಾಂಟಣಿ ಆದದ್ದು ಇಲ್ಲ ಎಂದರೆ ಸರಿಯಲ್ಲ. ನಿಪಿ–14 ರಲ್ಲಿ ಹೇಳಿರುವ ಆಸ್ತಿಗಳಿಗೆ ರೂ.1 ಕೋಟಿ 50 ಲಕ್ಷ ಇರುವುದರಿಂದ ಅದರ ಸ್ಟಾಂಪ್ ಡ್ಯೂಟಿ ಕಟ್ಟಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಬ ಸ್ವತ್ತಿನ ಐಟಂ ನಂಬರ್ 1 ಮನೆಯನ್ನು 1 ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಕಟ್ಟಿರುವುದರಿಂದ ನಾನು ಆ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಹಾಗೂ ಅದು ಅವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಬ ಸ್ವತ್ತಿನ ಐಟಂ ನಂಬರ್ 2 ಲ್ಲಿರುವ ಗೋದಾಮು ನನ್ನ ಅಜ್ಜನ ಕಾಲದಿಂದ ಇದ್ದ ಮನೆಯಾಗಿದ್ದು , ಅವರ ಮರಣ ನಂತರ ನನ್ನ ತಂದೆಯ ಹೆಸರಿನಲ್ಲಿ ಹಾಗೂ ತಂದೆಯ ಮರಣದ ನಂತರ ನನ್ನ ತಾಯಿಯ ಹೆಸರಿನಲ್ಲಿ ಆಯಿತು ಎಂದರೆ ಸಾಕ್ಷಿ ಅದು ಅಜ್ಜನ ಕಾಲದಲ್ಲಿ ಇದ್ದ ಮನೆ ಅಲ್ಲ, ನನ್ನ ತಾಯಿ ಕಟ್ಟಿಸಿರುವ ಮನೆ ಎಂದು ನುಡಿಯುತ್ತಾರೆ. ನನ್ನ ತಾಯಿ ಕಟ್ಟಿಸಿದರು ಹಾಗೂ ಅದಕ್ಕೆ ಎಷ್ಟು ಖರ್ಚಾಯಿತು ತೋರಿಸುವ ದಾಖಲೆ ಹಾಜರು ಪಡಿಸಿಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯನ್ನು ನಾನು ಹೇಳುವಂತೆ ಯಾವ ಕಾಲದಲ್ಲೂ ಹೊರಗೆ ಹಾಕಿಲ್ಲ ಎಂದು ನುಡಿಯುತ್ತಾರೆ. ಯಲ್ಲಾಪುರದ ಆ ಮನೆಯಲ್ಲಿ ತಿಂಗಳಿಗೆ ರೂ. 1 ಲಕ್ಷ ಬಾಡಿಗೆ ಬರುವ ಹಣದಿಂದ 1 ನೇ ಪ್ರತಿವಾದಿ ಸ್ವಲ್ಪ ಹಣ ಕೇಳಿರುವುದರಿಂದ ನನ್ನ ತಾಯಿ ಅಲ್ಲೆ ಹೋಗಿ ವಾಸಿಸಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ. ನನ್ನ ತಾಯಿ 3 ವರ್ಷದಿಂದ ಅಲ್ಲಿ ಯಲ್ಲಾಪುರದಲ್ಲಿ ವಾಸ ಇದ್ದಾರೆ.

**50**. ನಾನು 1 ನೇ ಪ್ರತಿವಾದಿಯನ್ನು ಭೇಟಿಯಾಗಿ ತಾಯಿಯನ್ನು ಯಾಕೆ ಮನೆಯಿಂದ ಹೊರ ಹಾಕಿದೆ ಎಂದು ಕೇಳಿದ್ದಕ್ಕೆ 1 ನೇ ಪ್ರತಿವಾದಿ ಅಸಂಬದ್ಧ ಉತ್ತರ ನೀಡಿ ನನ್ನನ್ನು ತವರು ಮನೆಗೆ ಬರಬಾರದು ಹಾಗೂ ಆಸ್ತಿಯಲ್ಲಿ ಹಕ್ಕಿಲ್ಲ ಎಂದು ತಿಳಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಕಾನೂನು ಬದ್ಧ ಹಕ್ಕುಗಳು ಇಲ್ಲ ಎಂದರೆ ಸರಿಯಲ್ಲ. ನನಗೆ ಮಾಹಿತಿ ಇಲ್ಲದೆ ಇದ್ದರೂ ಕೂಡ ನನ್ನ ತಾಯಿ ಯ ಮಾತು ಕೇಳಿಕೊಂಡು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.